# ದೊಡ್ಡಪಾಲನಹಳ್ಳಿ ಇತಿಹಾಸ ಮತ್ತು ಐತಿಹ್ಯ: ಸಂಬಂಧಗಳ ಅಧ್ಯಯನ

**ಸತೀಶ್ ಎ.ಎಂ.***

**DOI: https://doi.org/10.5281/zenodo.21241516**

**ABSTRACT**

ಇತಿಹಾಸ ಮತ್ತು ಐತಿಹ್ಯಗಳ ನಡುವಿನ ಸಂಬಂಧವನ್ನು ದೊಡ್ಡಪಾಲನಹಳ್ಳಿಯ ಸಾಂಸ್ಕೃತಿಕ ಹಾಗೂ ಭೌತಿಕ ಕುರುಹುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವಿದು. ವಿಜಯನಗರ ಸಾಮ್ರಾಜ್ಯದ ಪೂರ್ವದ ಐತಿಹಾಸಿಕ ವ್ಯಕ್ತಿ 'ಗಂಡುಗಲಿ ಕುಮಾರರಾಮ' ದೂರದ ಹಳ್ಳಿಯಲ್ಲಿ ಜಾನಪದ ದೈವವಾಗಿ ನೆಲೆಸಿರುವ ವಿಸ್ಮಯ, ಆತನ ದೇವಾಲಯದ ಸ್ಥಾಪನೆಯ ಹಿಂದಿರುವ ಮೌಖಿಕ ಕಥನಗಳು ಹಾಗೂ ನಂಬಿಕೆಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಅಲ್ಲದೆ, ಗ್ರಾಮದ 'ತೋಳಗೈಯಮ್ಮನ ಗುಡಿ'ಯ (ಮಾಸ್ತಿಕಲ್ಲು) ಹಿನ್ನೆಲೆಯಲ್ಲಿ ಪಾಲನಾಯಕ ಹಾಗೂ ವಲಸೆ ಬಂದ ಕುಟುಂಬದ ಜಕ್ಕನಾಯಕನ ನಡುವೆ ನಡೆದ ಕದನದ ರೋಚಕ ಐತಿಹ್ಯವನ್ನು ತೆರೆದಿಡಲಾಗಿದೆ. ಗ್ರಾಮದಲ್ಲಿ ದೊರೆತಿರುವ, ಬುಕ್ಕರಾಯನ ಉಲ್ಲೇಖವಿರುವ ಕ್ರಿ.ಶ. 1343ರ ವೀರಗಲ್ಲು ಶಾಸನದಲ್ಲಿನ ಅಂಶಗಳನ್ನು ಸ್ಥಳೀಯ ಐತಿಹ್ಯಗಳೊಂದಿಗೆ ಮುಖಾಮುಖಿಯಾಗಿಸಿ, ಇತಿಹಾಸದ ಪುಟಗಳಲ್ಲಿ ಮರೆಯಾಗಿರುವ ಸತ್ಯಗಳನ್ನು ಶೋಧಿಸುವ ತಾತ್ವಿಕ ಚಿಂತನೆಯನ್ನು ಮಂಡಿಸಲಾಗಿದೆ. ಶಾಸನಗಳು ಹಾಗೂ ಮೌಖಿಕ ಪರಂಪರೆಯ ಕೊಂಡಿಗಳನ್ನು ಬೆಸೆಯುವ ಮೂಲಕ ಸ್ಥಳೀಯ ಚರಿತ್ರೆಯ ಮರುನಿರ್ಮಾಣಕ್ಕೆ ಇಲ್ಲಿ ಒತ್ತು ನೀಡಲಾಗಿದೆ.

**KEYWORDS:** ದೊಡ್ಡಪಾಲನಹಳ್ಳಿ, ಕುಮಾರರಾಮ, ಐತಿಹ್ಯ ಮತ್ತು ಚರಿತ್ರೆ, ಮಾಸ್ತಿಕಲ್ಲು, ವೀರಗಲ್ಲು ಶಾಸನ.

* **ಸತೀಶ್ ಎ.ಎಂ.,** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ, ಶಿರಾ ತಾಲ್ಲೂಕು.

ಇತಿಹಾಸಕ್ಕೆ ಸಂವಾದಿಯಾಗಿ 'ಚರಿತ್ರೆ' ಎಂಬ ಪದ ಬಳಸುತ್ತೇವೆ. ಚರಿತ್ರೆಯ ರಚನಾಶಾಸ್ತ್ರದಲ್ಲಿ ದಾಖಲೆಗಳ ಪೂರ್ಣ ಪ್ರಯೋಜನವನ್ನು ಪಡೆಯುವ ಬಗ್ಗೆ ಮಾಹಿತಿಗಳಿವೆ. ಈ ದಾಖಲೆಗಳಲ್ಲಿ ಐತಿಹ್ಯವು ಒಂದು. ಐತಿಹ್ಯ ಮತ್ತು ಇತಿಹಾಸ ಇವೆರಡೂ ಒಂದೇ ಮೂಲದ ಸಂಸ್ಕೃತ ಪದಗಳು 'ಹೀಗೆ ಇತ್ತು' ಅದರ ಸಾಮಾನ್ಯ ಅರ್ಥ. ಐತಿಹ್ಯವು ಇತಿಹಾಸಕ್ಕೆ ಸಮೀಪವರ್ತಿಯಾದುದು ಚರಿತ್ರೆಯ ನಿರ್ಮಿತಿಯಂತೆ ಇಲ್ಲಿ ಕೂಡ ಭೌತಿಕ ಆಧಾರವೊಂದನ್ನು ಅದರ ಮೂಲ ಸ್ವರೂಪದಲ್ಲಿಯೇ ಹಿಡಿದಿಟ್ಟುಕೊಳ್ಳಲಾಗುವುದು. ಅನಂತರ ನಂಬಿಕೆಗಳ, ಕಲ್ಪನೆಗಳ ಆಧಾರದಿಂದ ಬೆಳೆಸಲಾಗುವುದು. ಭೌತಿಕ ಆಧಾರವೊಂದನ್ನು ಆಧರಿಸಿ ಹುಟ್ಟಿದ ಕಥನಗಳು ಐತಿಹ್ಯಗಳಾದರೆ ಅದೇ ಆಧಾರವನ್ನು ಆಧರಿಸಿ ವಸ್ತುನಿಷ್ಠ, ವೈಜ್ಞಾನಿಕ ನಿರೂಪಣೆ ಚರಿತ್ರೆಯಾಗಬಹುದು. ಜನಪದರ ಮಟ್ಟಿಗೆ ಐತಿಹ್ಯಗಳೇ ಚರಿತ್ರೆಗಳಾಗಿವೆ. ನಾಚಿರಾಜ "ಐತಿಹ್ಯಕ್ಕೆ ಪ್ರಮಾಣ ಬೇಡ" ಎಂದು, ನಿಜಗುಣಶಿವಯೋಗಿ ಲೋಕವಾರ್ತೆಯೇ ಐತಿಹ್ಯಕ್ಕೆ ಪ್ರಮಾಣ ಎಂದು ನುಡಿದು ಸುಮಾರು 14/15 ನೆಯ ಶತಮಾನದಲ್ಲಿಯೇ ಇಂಥ ಚರ್ಚೆ ನಡೆದಿರುವುದನ್ನು ಗಮನಿಸಿದರೆ ಇಂಗ್ಲಿಷ್‌ಗಿಂತ ಮುಂಚೆಯೇ ಐತಿಹ್ಯದ ಬಗೆಗೆ ಒಂದು ಕಲ್ಪನೆ ಇಲ್ಲಿ ಮೂಡುತ್ತಿರುವುದು ಖಚಿತವಾಗುತ್ತಿದೆ.[1] ಸತ್ಯಶೋಧಕ್ಕೆ ಇದು ಒಂದು ಪ್ರಮಾಣವಾಗಿದೆ. ಈ ನಿಟ್ಟಿನಲ್ಲಿ ದೊಡ್ಡಪಾಲನಹಳ್ಳಿಯ ಇತಿಹಾಸ ಮತ್ತು ಐತಿಹ್ಯಗಳ ಸಂಬಂಧದ ಅಧ್ಯಯನವೇ ಇಲ್ಲಿನ ಉದ್ದೇಶವಾಗಿದೆ.

ಗಂಡುಗಲಿ ಕುಮಾರ ರಾಮ ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿದ್ದ ರಾಜ. ಇತಿಹಾಸದಲ್ಲಿ ಇವನ ಉಲ್ಲೇಖವಿದೆ. ಸಾಹಿತ್ಯದಲ್ಲಿ ಕಾವ್ಯ, ಕಾದಂಬರಿಗಳು ಈತನ ಬಗ್ಗೆ ರಚನೆಯಾಗಿದೆ. ಶೀಲ ಮತ್ತು ಶೌಚಕ್ಕೆ ಹೆಸರಾದ ಕುಮಾರರಾಮ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಕುಮಟದುರ್ಗದವನು. ವಿಜಯನಗರ ಸ್ಥಾಪನೆಗೆ ಕಾರಣರಾದ ಹಕ್ಕ ಮತ್ತು ಬುಕ್ಕ ಇವನ ಆಸ್ಥಾನದಲ್ಲಿದ್ದರು. 'ಪರನಾರಿ ಸಹೋದರ' ಎಂದು ಪ್ರಸಿದ್ಧನಾದವನು. ಹುಳಿಯಾರು (ತುಮಕೂರು ಜಿಲ್ಲೆ) ಮಾರಗೊಂಡನ ಮೇಲೆ ದಂಡೆತ್ತಿ ಬಂದು ವಿಜಯ ಸಾಧಿಸಿದ. ದೆಹಲಿ ಸುಲ್ತಾನರ ಮೇಲೆ ನಡೆದ ಮೂರು ಯುದ್ಧದಲ್ಲಿ ಎರಡು ಬಾರಿ ಜಯಗಳಿಸಿ, ಮೂರನೇ ಯುದ್ಧದಲ್ಲಿ ಸಾವನ್ನಪ್ಪಿದ. ತಂದೆಯು ನೀಡಿದ ಪಂಥವನ್ನು ಸ್ವೀಕರಿಸಿ ಓರಂಗಲ್ಲಿಗೆ ಹೋಗಿ ಬೊಲ್ಲ ಕುದುರೆಯನ್ನು ಗೆದ್ದು ತಂದ. ಹೀಗೆ ವೀರೋಚಿತವಾಗಿ ಬಾಳಿದ ಕುಮಾರರಾಮ ಚರಿತ್ರೆ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಹೀಗೆ ಐತಿಹಾಸಿಕ ವ್ಯಕ್ತಿಯಾದ ಕುಮಾರರಾಮ ಕುಮ್ಮಟದುರ್ಗದಿಂದ ಸುಮಾರು 300 ಕಿ.ಮೀ. ದೂರದ ಈ ಹಳ್ಳಿಯಲ್ಲಿ ಜಾನಪದ ದೈವನಾಗಿ, ಸಾಂಸ್ಕೃತಿಕ ನಾಯಕನಾಗಿ ನೆಲೆಸಿ ಭಕ್ತರಿಂದ ಪೂಜಿಸಲ್ಪಡುತ್ತಿದ್ದಾನೆ. ಈ ಊರಿನ ದೇವಾಲಯದಲ್ಲಿ ಕುಮಾರರಾಮ, ತಾಯಿ ಹರಿಯಾಲದೇವಿ (ಗರ್ಭಗುಡಿಯಲ್ಲಿ) ಅಣ್ಣ ಕಾಟಣ್ಣ, ಮಂತ್ರಿ ಬೈಚಣ್ಣ (ಗರ್ಭಗುಡಿ ಮುಂದೆ ಕಲ್ಲಿನ ಶಿಲ್ಪದ ರೂಪದಲ್ಲಿ) ಗರ್ಭಗುಡಿಯ ಬಲಭಾಗದ ಗೋಡೆಯ ಬಳಿ ಕುಮಾರರಾಮನ ಆಪ್ತರು, ಸೈನಿಕರು (ಕಲ್ಲಿನ ರೂಪದಲ್ಲಿ) ಮತ್ತು ದೊಡ್ಡಮ್ಮ ಕಾಟಮ್ಮ (ಕಂಪಿಲರಾಯನ ಹಿರಿಯ ಹೆಂಡತಿ ಕಾಟಣ್ಣನ ತಾಯಿ) ಊರಿನ ಹೊರಗೆ ಬೆಟ್ಟದ ಸಮೀಪ ಶಿಥಿಲಗೊಂಡಿರುವ ಗುಡಿಯಲ್ಲಿ ನೆಲೆಸಿದ್ದಾರೆ. ಒಟ್ಟಿನಲ್ಲಿ ಕುಮಾರ ರಾಮನ ರಾಜ್ಯದಲ್ಲಿದ್ದ ಪ್ರಮುಖರೆಲ್ಲರು ಈ ಊರಲ್ಲಿ ನೆಲೆಸಿದ್ದಾರೆ. ತಂದೆ ಯಾವ ರೂಪದಲ್ಲಿಯೂ ಕಾಣಿಸಿಕೊಳ್ಳದಿರುವುದು ಆಶ್ಚರ್ಯವಾಗಿದೆ.

**ಕುಮಾರರಾಮ ದೇವಾಲಯ ಸ್ಥಾಪನೆಗೆ ಸಂಬಂಧಿಸಿದ ಐತಿಹ್ಯ:**

ಈ ಊರಿನ ದಾಸಪ್ಪ ಕುಮಟದುರ್ಗದ ಕಡೆಗೆ ಯಾತ್ರೆ ಹೋಗಿ ಹಿಂತಿರುಗಿ

ಬರುವಾಗ ತನ್ನ ಹಸಿವನ್ನು ನೀಗಿಸಿಕೊಳ್ಳಲು ಭವನಾಸಿಯೊಳಕ್ಕೆ ಒಂದು ಮುದ್ದೆಯನ್ನು ಹಾಕಿಕೊಂಡು ಬಂದನಂತೆ. ಇನ್ನೇನು ಊರ ಹತ್ತಿರ ಬಂದಾಗ ಹಸಿವಾಗಿ ಹತ್ತಿರದಲ್ಲಿದ್ದ ಬಾವಿಯ ಬಳಿ ಕುಳಿತು ಮುದ್ದೆ ತಿನ್ನಲು ಭವನಾಸಿ ತೆಗೆಯುತ್ತಾನೆ. ಭವನಾಸಿಯೊಳಗಿದ್ದ ಮುದ್ದೆ ಕಲ್ಲಾಗಿ ಹೋಗಿತ್ತಂತೆ. ಗಾಬರಿಯಾಗಿ ಕಲ್ಲಾಗಿದ್ದ ಮುದ್ದೆಯನ್ನು ಬಾವಿಯೊಳಕ್ಕೆ ಎಸೆದು ಊರಿಗೆ ಬಂದನಂತೆ. ಸ್ವಲ್ಪ ದಿನದ ನಂತರ ಊರಿನ ವ್ಯಕ್ತಿಯೊಬ್ಬನ ಕನಸಿಗೆ ಬಂದು ನಿಮ್ಮ ಊರ ಹತ್ತಿರದಲ್ಲಿರುವ ಬಾವಿಯಲ್ಲಿದ್ದೇನೆ ನನ್ನನ್ನು ತಂದು ನಿಮ್ಮೂರಲ್ಲಿಟ್ಟು ಪೂಜೆ ಮಾಡಿ ಎಂದು ಹೇಳಿದಂಗಾಯ್ತಂತೆ. ಅದರಂತೆ ಬಾವಿ ಬಳಿ ಹೋಗಿ ಅದರೊಳಗಿಳಿದು ನೋಡಿದಾಗ ಅಲ್ಲಿ ಒಂದು ಕಲ್ಲಿತ್ತಂತೆ. ಅದನ್ನು ತಗೊಂಡು ಬಂದು ಊರಲ್ಲಿ ಸ್ಥಾಪನೆ ಮಾಡಿದ್ರಂತೆ. ಅದಾದ ಮೇಲೆ ಒಂದು ಸಲ ಶೆಟ್ಟರು ವ್ಯಾಪಾರಕ್ಕೆ ಈ ಊರಿನ ಮಾರ್ಗವಾಗಿ ತುಮಕೂರಿಗೆ ಹೋಗುತ್ತಿದ್ದರಂತೆ. ಒಂದು ದಿನ ಎತ್ತಿನ ಗಾಡಿಯಲ್ಲಿ ವ್ಯಾಪಾರದ ಸಾಮಗ್ರಿಗಳನ್ನು ಹಾಕಿಕೊಂಡು ಈ ಊರಿಗೆ ಬಂದಾಗ ರಾತ್ರಿಯಾಯ್ತಂತೆ. ರಾತ್ರಿ ಅಲ್ಲೇ ಉಳಿದುಕೊಂಡು ಬೆಳಗ್ಗೆ ಎದ್ದು ಹೊರಡಲು ಸಿದ್ಧವಾಗಿ ನೋಡ್ತಾರಂತೆ ಎತ್ತುಗಳು ಮೂರ್ಛೆ ಹೋಗಿದ್ವಂತೆ. ಯಾಕೆ ಈ ತರ ಆಯ್ತು ಅಂತ ಯೋಚನೆ ಮಾಡ್ತಾ ಇದ್ದಾಗ ಅಲ್ಲೇ ಇದ್ದ ಒಬ್ಬ ಹುಡುಗನ ಮೈ ಮೇಲೆ ದೇವರು ಬಂದು "ನಾನೇ ನಿಮಗೆ ತೊಂದರೆ ಕೊಟ್ಟಿರೋದು ನೀವು ನನ್ನ ಕಲ್ಲು ಅಂತ ತಿಳಿದುಕೊಂಡು ಅದಕ್ಕೆ ಎತ್ತುಗಳನ್ನು ಕಟ್ಟಿಹಾಕಿದ್ದೀರಾ. ನನ್ನನ್ನು ಇಲ್ಲಿ ತಂದು ಸ್ಥಾಪನೆ ಮಾಡಿದಂತ ಜನ ಗುಡಿ ಗೋಪುರ ಏನು ಮಾಡಿಲ್ಲ. ಆದ್ದರಿಂದ ನೀವು ಗುಡಿ ಕಟ್ಟಿಸಿದರೆ ನಿಮ್ಮ ಪೀಳಿಗೆಗೆ ಒಳ್ಳೇದು ಮಾಡ್ತೀನಿ ಅಂತ ಹೇಳ್ತಂತೆ". ಅದೇ ಪ್ರಕಾರವಾಗಿ ಅವತ್ತೇ ಆ ಕಲ್ಲಿಗೆ ಚಿಕ್ಕದೊಂದು ಗುಡಿ ಕಟ್ಟಿ ಪೂಜೆ ಮಾಡಿಸಿ ಪ್ರಸಾದ ಹಂಚಿದರಂತೆ, ಮೂರ್ಛೆ ಹೋಗಿದ್ದ ಎತ್ತುಗಳು ತಾನೇ ತಾನಾಗಿ ಎದ್ದು ನಿಂತವಂತೆ. ಅಂದಿನಿಂದ ಶೆಟ್ಟರು ಈ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತರಾಗಿ ನಡೆದುಕೊಳ್ಳುತ್ತಾರೆ. ಪ್ರತಿ ವರ್ಷ ನಡೆಯುವ ಜಾತ್ರೆಯಲ್ಲಿ ಇವರ ಕಡೆಯಿಂದ ಪೂಜೆ ಉತ್ಸವ ಇರುತ್ತದೆ.

ಹೀಗೆ ದೇಗುಲದ ಸ್ಥಾಪನೆಗೆ ಸಂಬಂಧಿಸಿದ ಐತಿಹ್ಯ ಜನರ ಬಾಯಲ್ಲಿ ಮೌಖಿಕ ಕಥನ ರೂಪದಲ್ಲಿ ಸಾಗಿ ಬಂದಿದೆ. ಈ ಐತಿಹ್ಯವೊಂದನ್ನು ಹೊರತುಪಡಿಸಿದರೆ ಈ ದೇವಾಲಯ ಸ್ಥಾಪನೆಗೆ ಸಂಬಂಧಿಸಿದಂತೆ ಯಾವ ಲಿಖಿತ ದಾಖಲೆಗಳು ಇಲ್ಲ.

**ತೋಳಗೈಯಮ್ಮನ ಗುಡಿ (ಮಾಸ್ತಿಕಲ್ಲು ):**

ಪಾಲನಹಳ್ಳಿಯಿಂದ ಪಶ್ಚಿಮದ ದಿಕ್ಕಿಗೆ ತುಮಕೂರಿಗೆ ಹೋಗುವ ಮಾರ್ಗದಲ್ಲಿ ಒಂದರ್ಧ ಕಿ.ಮೀ ಚಲಿಸಿದರೆ ರಸ್ತೆಯ ಬಲಭಾಗಕ್ಕೆ ಅಡಿಕೆ ತೋಟ ಮತ್ತು ಹಳ್ಳದ ಅಂಚಿನ ಬದುವಿನಲ್ಲಿ ಪಾಳುಬಿದ್ದಿರುವ ಕಲ್ಲಿನ ಚಿಕ್ಕ ಮಂಟಪವೊಂದು ಕಾಣುತ್ತದೆ. ಅದರೊಳಗಿರುವ ಶಾಸನ ಶಿಲ್ಪವೇ ಈ ಮಹಾಸತಿ ಕಲ್ಲು (ಮಾಸ್ತಿಕಲ್ಲು ). ಸ್ಥಳೀಯರು ಇದನ್ನು ತೋಳಗೈಯಮ್ಮನ ಗುಡಿ ಎಂದು ಕರೆಯುತ್ತಾರೆ. ಈ ಮಾಸ್ತಿಕಲ್ಲು ಸುಮಾರು ಎರಡುವರೆಯಿಂದ ಮೂರು ಅಡಿ ಎತ್ತರ, ಒಂದೂವರೆ ಅಡಿ ಅಗಲವಿದ್ದು ಬಳೆಸಹಿತವಾದ ಕೈತೋಳಿನ ಚಿತ್ರವನ್ನು ಈ ಶಾಸನ ಶಿಲ್ಪ ಒಳಗೊಂಡಿದೆ ಆದ್ದರಿಂದ ಇಲ್ಲಿನ ಜನ ಇದನ್ನು ತೋಳಗೈಯಮ್ಮನ ಗುಡಿ ಎಂದೇ ಕರೆಯುತ್ತಾರೆ. ಪಾಲನಹಳ್ಳಿಯ ಮಜರೆ ಗ್ರಾಮವಾದ ಹೊಸಹಳ್ಳಿಯ ಒಕ್ಕಲಿಗ ಸಮುದಾಯದ ಕೆಲವು ಕುಟುಂಬಗಳು ಶ್ರದ್ಧಾ ಭಕ್ತಿಯಿಂದ ಈ ಮಾಸ್ತಿಕಲ್ಲನ್ನು ಪೂಜಿಸುತ್ತಾರೆ. ಯುಗಾದಿ, ದೀಪಾವಳಿ, ದಸರಾ ಹಬ್ಬಗಳಲ್ಲಿ ವಿಶೇಷ ಅಡುಗೆ ಮಾಡಿ ತಂದು ಮಾಸ್ತಿ ಕಲ್ಲಿಗೆ ಪೂಜೆ ಸಲ್ಲಿಸಿ ನೈವೇದ್ಯ ಮಾಡಿ ಆ ಕಲ್ಲಿನ ಮುಂದೆ ಒಂದು ತಾಳಿಯನ್ನಿಟ್ಟು ಅದಕ್ಕೆ ಅರಿಶಿನ ಕುಂಕುಮದಿಂದ ಪೂಜಿಸಿ ನಮಸ್ಕರಿಸಿ, ನೈವೇದ್ಯ ಮಾಡಿದ ಪ್ರಸಾದವನ್ನು ಮನೆಮಂದಿಯೆಲ್ಲಾ

ಸೇವಿಸುತ್ತಾರೆ. ಈ ತೋಳಗೈಯಮ್ಮನಿಗೆ ಪೂಜೆ ಸಲ್ಲಿಸದಿದ್ದರೆ ಅವರ ಮನೆ ಮಂದಿಗೆಲ್ಲಾ ತಲೆ ಕೈ ಕಾಲುಗಳಲ್ಲಿ ಗಾಯವಾಗಿ ಕೀವು ಸೋರಲು ಪ್ರಾರಂಭವಾಗುತ್ತದೆಯಂತೆ. ಒಂದು ವರ್ಷ ಪೂಜೆ ಸಲ್ಲಿಸುವುದನ್ನು ಮರೆತರೆ ಅವರ ಕಣ್ಣಿಗೆ ಆಗಾಗ ಸರ್ಪ ಕಾಣಿಸಿಕೊಳ್ಳುತ್ತದೆಯಂತೆ. ಆದ್ದರಿಂದ ಇವರುಗಳು ತಪ್ಪದೇ ಈ ಮಾಸ್ತಿಕಲ್ಲಿಗೆ ಪೂಜೆ ಸಲ್ಲಿಸಿ ಶ್ರದ್ಧಾ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ತೋಳಗೈಯಮ್ಮ ಯಾರು? ಈಕೆ ಮಹಾಸತಿಯಾದದ್ದು ಹೇಗೆ ಎಂಬ ಪ್ರಶ್ನೆ ಕಾಡತೊಡಗಿತು. ಅದರ ಬೆನ್ನತ್ತಿ ಹೋದಾಗ ಮೌಖಿಕ ಕಥನರೂಪದಲ್ಲಿರುವ ಐತಿಹ್ಯವೊಂದು ಬೆಳಕಿಗೆ ಬಂದಿತು.

ಪಾಲನಾಯಕ ಜಕ್ಕನಾಯಕ ಮತ್ತು ಕುಮಟದುರ್ಗದ ಕಡೆಯಿಂದ ವಲಸೆ ಬಂದ ಗೌಡ ಕುಟುಂಬದ ನಡುವೆ ನಡೆದ ಕದನವನ್ನು ಈ ಐತಿಹ್ಯ ಹೇಳುತ್ತದೆ. ಪಾಲ/ಪಾಲನಾಯಕ (ಈತನಿಂದಲೇ ಈ ಊರಿಗೆ ಪಾಲನಹಳ್ಳಿ ಎಂಬ ಹೆಸರು ಬಂತು ಎಂದು ಹೇಳುತ್ತಾರೆ.) ಈತ ಊರಿಗಾಗಿ ಒಂದು ಕೆರೆಯನ್ನು ಕಟ್ಟಿಸಲು ತೀರ್ಮಾನಿಸಿ ಅದರಂತೆ ಕೆರೆಯ ನಿರ್ಮಾಣ ಕಾರ್ಯವನ್ನು ಆರಂಭ ಮಾಡುತ್ತಾನೆ. ಕೆರೆಯ ಏರಿಯನ್ನು ಕಟ್ಟಿಸಿದಂತೆಲ್ಲಾ ಜಕ್ಕನಾಯಕನೆಂಬುವನು ಬಂದು ಕೆರೆ ಏರಿಯನ್ನು ನಾಶ ಮಾಡುತ್ತಿರುತ್ತಾನೆ. ಇದರಿಂದ ಕೋಪಗೊಂಡ ಪಾಲನಾಯಕ ಒಂದು ಘೋಷಣೆ ಹೊರಡಿಸುತ್ತಾನೆ "ಯಾರು ಜಕ್ಕನಾಯಕನ ತಲೆ ಕಡಿದು ತಂದು ನನ್ನ ಮುಂದಿಡುತ್ತಾರೋ ಅವರಿಗೆ ಊರ ಹೊರಗೆ ಮತ್ತು ಊರಿನ ಒಳಗೆ ಅರ್ಧ ಮಾನ್ಯವು ಕೊಡುವುದಾಗಿ", ಡಂಗೂರ ಹಾಕಿಸುತ್ತಾನೆ. ರಾಯಚೂರು ಕುಮಟದುರ್ಗದ ಕಡೆಯಿಂದ ನಲವತ್ತು ಗೌಡ ಕುಟುಂಬಗಳು ವಲಸೆ ಬಂದು ಬೇವಿನಹಳ್ಳಿಯಲ್ಲಿ (ಪಾಲನಹಳ್ಳಿಯಿಂದ 8-9 ಕಿ.ಮೀ. ದೂರವಿದೆ.) ನೆಲೆಸಿದರು. ಕಾಲಾನಂತರ ಈ ಕುಟುಂಬಗಳು ಚದುರಿ ಇರಕಸಂದ್ರ, ಅಳಾಳಸಂದ್ರ, ಪಾಲನಹಳ್ಳಿ, ಹೊಸಹಳ್ಳಿ, ಜಕ್ಕೇನಹಳ್ಳಿ ಮತ್ತು ಚಿಕ್ಕಪಾಲನಹಳ್ಳಿಗಳಲ್ಲಿ ಪ್ರತ್ಯೇಕವಾಗಿ ನೆಲೆನಿಲ್ಲುತ್ತಾರೆ. ಪಾಲನಾಯಕನ ಘೋಷಣೆ ಕೇಳಿದ ವಲಸೆ ಬಂದ ಗೌಡ ಕುಟುಂಬದ ಕುಂಟನಾಗಿದ್ದ ಒಬ್ಬ ವ್ಯಕ್ತಿ ಜಕ್ಕನಾಯಕನ ತಲೆ ಕಡಿದು ತರಲು ತೀರ್ಮಾನಿಸುತ್ತಾನೆ. ಒಂದು ರಾತ್ರಿ ಆ ಕುಂಟ ವ್ಯಕ್ತಿ ಯಾರಿಗೂ ತಿಳಿಯದ ಹಾಗೆ ಅಡಗಿ ಕುಳಿತಿದ್ದು ಕೆರೆ ಏರಿ ನಾಶ ಮಾಡಲು ಬಂದ ಜಕ್ಕನಾಯಕನ ತಲೆ ಕಡಿದು ತಂದು ಪಾಲನ ಮುಂದಿಟ್ಟು ನೀನು ಹೇಳಿದಂತೆ ಜಕ್ಕನಾಯಕನ ತಲೆ ಕಡಿದು ತಂದಿದ್ದೇನೆ ಊರಹೊರಗೆ ಮತ್ತು ಒಳಗೆ ಅರ್ಧ ಮಾನ್ಯವು ಕೊಡುವಂತೆ ಕೇಳುತ್ತಾನೆ. ಕುಂಟನೊಬ್ಬನಿಂದ ಬಲಿಷ್ಠವಾದ ಜಕ್ಕನ ತಲೆ ಕಡಿಯಲು ಸಾಧ್ಯವೇ ಎಂದು ಯೋಚಿಸಿದ ಪಾಲ ಆ ಕುಂಟ ವ್ಯಕ್ತಿಗೆ ಒಂದು ಷರತ್ತು ಹಾಕುತ್ತಾನೆ. "ಹಸಿ ಮಡಕೆಯಲ್ಲಿ ನೀರು ತುಂಬಿಕೊಂಡು ಏಳು ಹಳ್ಳಿಗೆ ಕಾಲ್ನಡಿಗೆಯಲ್ಲಿ ಹೋಗಬೇಕು ಆ ಏಳು ಹಳ್ಳಿಯನ್ನು ಸುತ್ತಿ ಬಂದ ಮೇಲೂ ಆ ಮಡಕೆಯಲ್ಲಿ ನೀರು ಇದ್ದರೆ ನಿನಗೆ ಮಾನ್ಯವು ಕೊಡುವುದಾಗಿ ಹೇಳುತ್ತಾನೆ". ಪಾಲ ವಿಧಿಸಿದ್ದ ಷರತ್ತಿನಂತೆ ಆ ಕುಂಟ ವ್ಯಕ್ತಿ ಹಸಿ ಮಡಕೆಯಲ್ಲಿ ನೀರು ತುಂಬಿಕೊಂಡು ಏಳು ಹಳ್ಳಿಯನ್ನು ಸುತ್ತಿ ಷರತ್ತನ್ನು ಪೂರ್ಣಗೊಳಿಸಿ ಬಂದು ಪಾಲನ ಮುಂದೆ ನಿಂತು ಆಡಿದ ಮಾತಿನಂತೆ ಮಾನ್ಯವನ್ನು ಕೊಡುವಂತೆ ಕೇಳುತ್ತಾನೆ. ಪಾಲನಾಯಕ ಮಾನ್ಯವನ್ನು ಕೊಡಲು ಒಪ್ಪದಿದ್ದಾಗ ಕೋಪಗೊಂಡ ಆ ಕುಂಟವ್ಯಕ್ತಿ ನಡೆದ ವಿಚಾರವನ್ನು ತನ್ನ ದಾಯಾದಿಗಳಿಗೆ ತಿಳಿಸಿ ಅವರನ್ನೆಲ್ಲಾ ಒಗ್ಗೂಡಿಸಿಕೊಂಡು ಪಾಲನ ಮೇಲೆ ಹೋರಾಟಕ್ಕೆ ಬರುತ್ತಾನೆ. ಪಾಲನ ಕಡೆಯವರಿಗೂ ಕುಂಟವ್ಯಕ್ತಿಯ ಕಡೆಯವರಿಗೂ ಹೋರಾಟ ನಡೆಯುತ್ತಿರುವಾಗ ಪಾಲನ ಕಡೆಯವರು ಬೀಸಿದ ಕತ್ತಿಯಿಂದ ತನ್ನ ಗಂಡನ ಪ್ರಾಣವನ್ನು ಕಾಪಾಡಲು ಮಹಿಳೆಯೊಬ್ಬಳು ಅಡ್ಡಬರುತ್ತಾಳೆ. ಆಕೆಯ ಕೈ ಕತ್ತರಿಸಿ ಬಿದ್ದು ಆ ನೋವಿನಲ್ಲೇ

ಆಕೆ ಮೃತಳಾಗುತ್ತಾಳೆ. ಅಂತಿಮವಾಗಿ ಈ ಹೋರಾಟದಲ್ಲಿ ಪಾಲ ಸಾವನ್ನಪ್ಪುತ್ತಾನೆ. ಆಕೆಯ ನೆನಪಿಗಾಗಿ ಆ ಕುಟುಂಬದವರು ಕೈತೋಳಿನ ರೂಪದ ಸ್ಮಾರಕವನ್ನು ನಿಲ್ಲಿಸಿದರು ಎಂಬುದಾಗಿ ಮಾಸ್ತಿಕಲ್ಲಿಗೆ ಸಂಬಂಧಿಸಿದಂತೆ ಐತಿಹ್ಯ ಹೇಳುತ್ತಾರೆ. ಹೊಸಹಳ್ಳಿಯ ಕೆಲವು ಒಕ್ಕಲಿಗ ಸಮುದಾಯದ ಕುಟುಂಬಗಳು ಮಾಸ್ತಿಕಲ್ಲಿಗೆ ಈಗಲೂ ಪೂಜೆ ಸಲ್ಲಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ.

**ಲಿಪಿಯಿರುವ ವೀರಗಲ್ಲು ಶಾಸನ:**

ಈ ಊರಿನ ಕುಮಾರ ರಾಮನ ದೇವಾಲಯದ ಮುಂದೆ ಬಲಭಾಗದಲ್ಲಿ ಲಿಪಿಯಿರುವ ವೀರಗಲ್ಲು ಶಾಸನವಿದೆ. ಈ ಶಾಸನದಲ್ಲಿ ಬುಕ್ಕರಾಯನ ಹೆಸರು ಉಲ್ಲೇಖವಾಗಿದೆ. ಶಾಸನದಲ್ಲಿ "ಸ್ವಭಾನು ಸಂವತ್ಸರದ ಆಷಾಢ ಶುದ್ಧ ಪಂಚಮಿ ಸೋಮವಾರ" ಎಂದು ಉಕ್ತವಾಗಿದೆ. ಶಕವರ್ಷದ ಉಲ್ಲೇಖವಿಲ್ಲ. ಲಿಪಿಸ್ವರೂಪ, ತೇದಿ ವಿವರಗಳನ್ನು ಹೋಲಿಸಿಕೊಂಡು ಶಾಸನದ ಕಾಲ 1343 ಎಂದು, ಆಗ ವಿಜಯನಗರದಲ್ಲಿ ಹಕ್ಕಬುಕ್ಕರ ಆಳ್ವಿಕೆ ನಡೆಯುತ್ತಿರುತ್ತದೆ ಎಂದು ಶಾಸನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.[2] "ವಿಜಯನಗರ ಆರಂಭಕಾಲದ ಪ್ರಾಯಶಃ ಅದೇ ಊರಿನ ವ್ಯಕ್ತಿಯೋರ್ವನ ಐದು ಜನ ಮಕ್ಕಳು ಹೋರಾಟವೊಂದರಲ್ಲಿ ಕಾದು ಮಡಿದು ಸ್ವರ್ಗಸ್ಥರಾದ ಸಂಗತಿಯನ್ನು ಈ ಶಾಸನ ನಿರೂಪಿಸುವಂತಿದೆ. ಈ ಶಾಸನದ ಮೂರು ಮತ್ತು ಎಂಟನೆಯ ಸಾಲಿನ ವಿವರಗಳು ಅಸ್ಪಷ್ಟವಾಗಿರುವುದರಿಂದ ಆ ಐದು ಜನ ವೀರರ ತಂದೆ ಜಕೊಂಡ ಎಂದು ಮಾತ್ರ ಓದಲು ಸಾಧ್ಯವಾಗಿದೆ. ಮಾದಿಗೌಡ, ಹೊನ್ನಣ್ಣ, ನಿಂಗಣ್ಣ, ಹೇಯಣ್ಣ ಮತ್ತು ಜವನಪ್ಪ ಎಂದು ಐದು ಜನ ವೀರರ ಹೆಸರು ದಾಖಲಾಗಿದೆ. ಆದರೆ ಈ ವೀರರ ಹೋರಾಟ ಕಾರಣ ಸ್ಪಷ್ಟವಾಗಿಲ್ಲ." ಎಂದು ಶಾಸನ ಓದಿದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.[3] ಕುಮಾರರಾಮ ದೇವಾಲಯ, ಮಾಸ್ತಿಕಲ್ಲಿನ ಐತಿಹ್ಯ ಮತ್ತು ಲಿಪಿಯಿರುವ ವೀರಗಲ್ಲಿನ ಶಾಸನದಲ್ಲಿ ಉಕ್ತವಾಗಿರುವ ಅಂಶವನ್ನು ಗಮನಿಸಿದಾಗ ಹೋರಾಟ ನಡೆದಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಹಲವು ಪ್ರಶ್ನೆಗಳು, ಸಂಶಯಗಳು ಉದ್ಭವವಾಗುತ್ತವೆ.

ಈ ಶಾಸನದಲ್ಲಿ ಪಾಲ/ಪಾಲನಾಯಕನ ಹೆಸರು ಕಾಣುತ್ತಿಲ್ಲ. ಶಾಸನದ ಮೂರು ಮತ್ತು ಎಂಟನೆಯ ಸಾಲುಗಳ ವಿವರ ಅಸ್ಪಷ್ಟವಾಗಿರುವುದರಿಂದ ಹಾಗೂ ಮೂರನೇ ಸಾಲಿನಲ್ಲಿ ಪ ಅಕ್ಷರವಿದ್ದು ನಂತರದ ಅಕ್ಷರಗಳು ಸರಿಯಾಗಿ ಕಾಣದಿರುವುದರಿಂದ ಈ ಸಾಲಿನಲ್ಲಿ ಪಾಲನ ಹೆಸರು ಇರಬಹುದಾ? ಐತಿಹ್ಯದಲ್ಲಿ ಹೇಳಿರುವ ಹೋರಾಟಕ್ಕೂ ಶಾಸನದಲ್ಲಿ ಉಲ್ಲೇಖವಾಗಿರುವ ಹೋರಾಟಕ್ಕೂ ಸಂಬಂಧವಿರಬಹುದಾ? ವಲಸೆ ಬಂದ ಗೌಡ ಕುಟುಂಬದ ಜಕ್ಕನಾಯಕನನ್ನು ಹತ ಮಾಡಿದ ಕುಂಟವ್ಯಕ್ತಿ ಶಾಸನದಲ್ಲಿ ಉಲ್ಲೇಖವಾಗಿರುವ ಜಕೊಂಡನೇ ಇರಬಹುದಾ? ಕಾರಣ ಶಾಸನದಲ್ಲಿ ಉಲ್ಲೇಖವಾಗಿರುವ ಐವರು ವೀರರಲ್ಲಿ ಒಂದು ಹೆಸರು ಮಾದಿಗೌಡ ಎಂದಿದೆ. ಈ ಹೆಸರು ಗೌಡಮನೆತನವನ್ನು ಸೂಚಿಸುತ್ತಿರುವುದರಿಂದ ಆತ ಜಕೊಂಡನೇ (ಕುಂಟವ್ಯಕ್ತಿ) ಇರಬಹುದು ಎಂಬುದು ನನ್ನ ಊಹೆಯಾಗಿದೆ. ನಿಡಗಲ್ಲು ದುರ್ಗದ ಪಾಳೇಗಾರರ ವಂಶಾವಳಿಯಲ್ಲಿ ಬರುವ ಮೂರನೆಯ ಹೆಸರು ಪಾಲನಾಯಕ ಎಂದು ಪ್ರಸ್ತಾಪಿತವಾಗಿದೆ.[4] ಐತಿಹ್ಯದಲ್ಲಿ ಬರುವ ಪಾಲನಾಯಕ ನಿಡಗಲ್ಲುದುರ್ಗದ ಪಾಳೇಗಾರರ ವಂಶಾವಳಿಯಲ್ಲಿ ಬರುವ ಪಾಲನಾಯಕ ಬೇರೆ ಬೇರೆ ವ್ಯಕ್ತಿಗಳಾ ಅಥವಾ ಒಬ್ಬನೇ ವ್ಯಕ್ತಿನಾ ಅನ್ನೋದು ಪ್ರಶ್ನೆಯಾಗಿದೆ.

ಕುಮಾರರಾಮನ ಜೊತೆ ಯುದ್ಧದಲ್ಲಿ ಪಾಲ್ಗೊಂಡ ವೀರರ ಹೆಸರಲ್ಲಿ ಪಾಲ ಎಂಬ

ಹೆಸರು ಉಕ್ತವಾಗಿದೆ.[5] ಮುಮ್ಮಡಿ ಸಿಂಗನಾಯಕ (ಕುಮಾರರಾಮನ ತಾತ) ನಿಡಗಲ್ಲು ದುರ್ಗದ ಪಾಳೇಗಾರರ ಆಶ್ರಿತನಾಗಿದ್ದನು. ಇವನ ಮಂತ್ರಿ ಬೈಚಪ್ಪ (ಮುಮ್ಮಡಿ ಸಿಂಗನಾಯಕ, ಕಂಪಿಲರಾಯ, ಕುಮಾರರಾಮ, ಬುಕ್ಕ ಈ ನಾಲ್ವರಿಗೂ ಮಂತ್ರಿಯಾಗಿದ್ದ.) ನಿಡಗಲ್ಲು ದುರ್ಗದ ಪಾಳೇಗಾರರ ಆದೇಶದಂತೆ ಹನೆಯ ಮತ್ತು ನಿಡು ಎಂಬ ಕೋಟೆಗಳನ್ನು ನಿರ್ಮಿಸಿದ್ದಾನೆ.[6] ಈ ವಿವರಗಳನ್ನು ಗಮನಿಸಿದಾಗ ನಿಡಗಲ್ಲು ದುರ್ಗದ ಪಾಳೇಗಾರರಿಗೂ ಕುಮಟದುರ್ಗದ ನಾಯಕರಿಗೂ ಆತ್ಮೀಯತೆ ಇರುವಂತೆ ತೋರುತ್ತದೆ. ಕುಮಾರರಾಮ ಪ್ರಸಿದ್ಧಿ ಪಡೆದು ರಾಜನಾದ ನಂತರ ನಿಡಗಲ್ಲುದುರ್ಗದ ಪಾಳೇಗಾರರು ಕುಮಾರರಾಮನ ಆಳ್ವಿಕೆಗೆ ಒಳಪಟ್ಟಿರಬಹುದು. ಕುಮಾರರಾಮನಿಗೆ ಸಹಾಯಕರಾಗಿ ನಿಂತಿದ್ದ 77 ಮಾನ್ಯೇಯರಲ್ಲಿ ನಿಡಗಲ್ಲುದುರ್ಗದ ಪಾಳೇಗಾರರು ಸೇರಿರಬಹುದು. ಕುಮಾರರಾಮನ ಜೊತೆ ಯುದ್ಧದಲ್ಲಿ ಚೆಂಡಾಟದಲ್ಲಿ ಪಾಲ್ಗೊಂಡ 'ಪಾಲ'[7] ನಿಡಗಲ್ಲು ದುರ್ಗದ ಪಾಲನಾಯಕನೇ ಆಗಿರಬಹುದಾ? ಕುಮಾರರಾಮನ ಆಸ್ಥಾನದಲ್ಲಿ ಬುಕ್ಕ ಇದ್ದು ಅದೇ ಅವಧಿಯಲ್ಲಿ ಪಾಲನ ಹೆಸರೂ ಪ್ರಸ್ತಾಪವಾಗಿದ್ದು ಇವರಿಬ್ಬರ ನಡುವೆ ಸ್ನೇಹವಿದ್ದು ಕುಮಾರರಾಮನ ನಂತರದಲ್ಲೂ ಈ ಸ್ನೇಹ ಮುಂದುವರಿದಿರಬಹುದು.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಒಂದುವೇಳೆ ನಿಡಗಲ್ಲುದುರ್ಗದ ಪಾಳೇಗಾರರ ವಂಶಾವಳಿಯಲ್ಲಿ ಬರುವ ಪಾಲನಾಯಕ, ಕುಮಾರರಾಮನ ಜೊತೆ ಯುದ್ಧದಲ್ಲಿ ಪಾಲ್ಗೊಂಡ ಪಾಲ, ಐತಿಹ್ಯದಲ್ಲಿ ಬರುವ ಪಾಲ/ಪಾಲನಾಯಕ, ಶಾಸನದಲ್ಲಿ ಅಸ್ಪಷ್ಟವಾಗಿರುವ ಹೆಸರು ಪಾಲನೇ ಆಗಿದ್ದು (ಬುಕ್ಕನ ಹೆಸರು ಬಂದಿರುವುದರಿಂದ) ಈ ಎಲ್ಲಾ ಪಾಲ/ಪಾಲನಾಯಕರು ಒಬ್ಬನೇ ಎಂಬುದು ಆಳವಾದ ಸಂಶೋಧನೆ ನಡೆದು ರುಜುವಾತಾದರೆ ಮತ್ತಷ್ಟು ಹೊಸ ವಿಚಾರಗಳು ಬೆಳಕಿಗೆ ಬರುವ ಸಾಧ್ಯತೆ ದಟ್ಟವಾಗಿದೆ.

**ಕೊನೆ ಟಿಪ್ಪಣಿಗಳು:**

1. ಪುರುಷೋತ್ತಮ ಬಿಳಿಮಲೆ, ಐತಿಹ್ಯಗಳು (ಸುವರ್ಣಜಾನಪದ ಲೇಖನಗಳು – ಸಂ: ಡಾ. ವೀರಣ್ಣ ಮತ್ತು ಡಾ. ಶ್ರೀಪಾದಶೆಟ್ಟಿ), ಪು.ಸಂ. 44
2. ಕೃಷ್ಣಮೂರ್ತಿ, (2008), ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ (ಇತಿಹಾಸ ದರ್ಶನ ಸಂಪುಟ 23), ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ, ಪು.ಸಂ. 90
3. ಕೃಷ್ಣಮೂರ್ತಿ, (2008), ದೊಡ್ಡಪಾಲನಹಳ್ಳಿ ವೀರಗಲ್ಲು ಶಾಸನ ಮತ್ತು ಶಿಲ್ಪ (ಇತಿಹಾಸ ದರ್ಶನ ಸಂಪುಟ 23), ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ, ಪು.ಸಂ. 92
4. ಪರಮಶಿವಮೂರ್ತಿ ಡಿ.ವಿ., (1996), ಸಂಶೋಧನ ಸಿರಿ, ಬೆಂಗಳೂರು: ಗುರುನಿಧಿ ಪ್ರಕಾಶನ, ಪು.ಸಂ. 2
5. ಹುಲ್ಲೂರು ಶ್ರೀನಿವಾಸ ಜೋಯಿಸರು, (1955), ಗಂಡುಗಲಿ ಕುಮಾರರಾಮ, ಅರಸೀಕೆರೆ: ರಸಿಕ ರಂಜನಿ ಪ್ರಕಾಶನ, ಪು.ಸಂ. 13, 27, 63 & 102
6. ನಾಗಸಂಗಯ್ಯ, ಗಂಡುಗಲಿ ಕುಮಾರ ರಾಮ (ಉತ್ತರಾರ್ಧಭಾಗ), ಧಾರವಾಡ: ಮಿಂಚಿನ ಬಳ್ಳಿ ಕಾರ್ಯಾಲಯ, ಪು.ಸಂ. 42
7. ಹುಲ್ಲೂರು ಶ್ರೀನಿವಾಸ ಜೋಯಿಸರು, (1955), ಗಂಡುಗಲಿ ಕುಮಾರರಾಮ, ಅರಸೀಕೆರೆ: ರಸಿಕ ರಂಜನಿ ಪ್ರಕಾಶನ, ಪು.ಸಂ. 63